“ಭಾನುವಾರ ಎಲ್ಲರು ಬಾಗ್ಲಾಕ್ಕಂಡು ಮನೆಯೊಳ್ಗೆ ಕುಂತ್ಕಬೇಕಂತೆ. ನಮ್ಮ ದೇಶದ್ ಪ್ರಧಾನ್ಮಂತ್ರಿಗೋಳು ಟಿವಿಯೊಳಗೆ ಬಂದು ಹೇಳ್ಯಾರಂತೆ. ವಿಮಾನದಲ್ಲಿ ಬಂದೋರಿಂದ ಅದೇನೊ ಕ್ರಿಮಿ ರೋಗ ಹಬ್ಕಳ್ತಿದೆ ಅಂತಿದ್ರಲ್ಲ. ಅದನ್ನ ಸಾಯ್ಸಕ್ಕೆ ಆಕಾಶದಿಂದ ಔಷ್ದಿ ಹೊಡಿತಾರಂತೆ. ಸಂಜೆ ಐದ್ಗಂಟೆಗೆ ಮಹಡಿ ಮೇಲಿರೋರು ಚಪ್ಪಾಳೆ ಹೊಡಿಬೇಕಂತೆ. ರೋಗ ಹಬ್ಸೋ ಕ್ರಿಮಿ ಸತ್ತೋಯ್ತದಂತೆ.” ವಿಚಿತ್ರ ಆತಂಕ, ಆತುರದಿಂದ ಹೇಳಿ ಮುಗಿಸಿದ್ದಳು ವೇಂಡಮಣಿ. “ನಮ್ ಗುಡ್ಲಲ್ಲಿ ನಾವು ಮೂರು ಮಂದಿ ಯಂಗಾರ ಕುಂತ್ಗಬೋದು. ಜಾಸ್ತಿ ಜನ ಇರೋರು, ಮಕ್ಳು ಮರಿ ಇಟ್ಗಂಡು ಒಳಗೇ ಕುಂತ್ಗಳದು ಹೆಂಗಮ್ಮಿ?...” ಮಾದೇವಿ ಎಲ್ಲರ ಚಿಂತೆ ತನ್ನದೇ ಎಂಬಂತೆ ರಾಗ ಎಳೆದಳು. ವೇಂಡಮಣಿಗಂತು ಅದು ಸ್ವಂತದ ಸಂಕಷ್ಟ. ಅವಳ ಗುಡಿಸಲಿನಲ್ಲಿ ಅಣ್ಣ ತಮ್ಮಂದಿರ ಸಂಸಾರ ಜೊತೆಗೇ ಇರುವುದರಿಂದ ಮಕ್ಕಳೂ ಅಲ್ಲೇ ಇದ್ದರು. ‘ಹೊರ್ಕಡೆನೇ ಬರ್ಬಾರ್ದು ಅಂದವ್ರಲ್ಲ... ಅಡುಗೆ ಮಾಡ್ಕಳದೆಂಗೆ?... ಸಂಡಾಸಿಗೆ ವೋಗಾದೆಂಗೆ? ಎಲ್ಲರೂ ರಾತ್ರಿ ತಂಕ ಹೊಟ್ಟೆ ಕೆಡಿಸ್ಕಂಡು ಒಂದೇ ಗೂಡೊಳಗೆ ಕುಂತ್ಗಳಕಾಯ್ತದ...” ಗೊಣಗುವಂತೆ ಹೇಳಿದಳು. ಮಾದೇವಿ ಏನೋ ಒಂದು ಹೇಳಬೇಕಲ್ಲ ಎಂಬಂತೆ,

“ಒಂದಿನ ನಡಿತದೆ ಬುಡು. ಆದ್ರೂ ಸೋಮವಾರ ಬಂದ್ ಮಾಡಿದಿದ್ರೆ ಆಗ್ತಿತ್ತು. ಐತ್ವಾರ ಹೂ ಯಾಪಾರ ಚೆಂದಾಕಿತ್ತು.” ಅಂದಳು. ಅಷ್ಟರಲ್ಲಿ ದೇವಸ್ಥಾನದತ್ತ ಜನ ಬಂದಿದ್ದರಿಂದ ಇಬ್ಬರೂ ತಮ್ಮ ವ್ಯಾಪಾರ ನಡೆಸುವುದರತ್ತ ಗಮನ ಕೊಟ್ಟರು.

★★★

ಮಾದೇವಿಗೆ ತನ್ನ ಸುತ್ತ ಏನು ನಡೆಯುತ್ತಿದೆಯೆಂದೇ ಅರ್ಥವಾಗುತ್ತಿರಲಿಲ್ಲ. ಜನತಾ ಕರ್ಫ್ಯೂ ದಿನ ಸಂಜೆ ಸುತ್ತಲಿನ ಮಾಳಿಗೆಗಳ ಬಾಲ್ಕನಿ ಮೇಲೆ, ಟೆರೇಸ್ ಮೇಲೆ ಜನ ನಿಂತು ಶಂಖ ಊದಿ ಜಾಗಟೆ ಬಡಿದರೆ, ಇನ್ನು ಕೆಲವರು ತಮ್ಮ ಶಕ್ತಿ ಇದ್ದಷ್ಟು ಬಲವಾಗಿ ತಾಟಿಗೆ ಸಟ್ಟುಗದಿಂದ ಬಡಿದು, ನೆಲದ ಮೇಲೆ ಶೆಡ್ಡಿನ ಮಂದಿ ಕೊರೊನಾ ಮಾರಿಯನ್ನು ಓಡಿಸಲು ತಂತಮ್ಮ ಗುಡಿಸಲಲ್ಲಿದ್ದ ಪಾತ್ರೆಯ ಅಂಡು ನೊಪ್ಪುವಂತೆ ಕೈಗೆ ಸಿಕ್ಕಿದ್ದರಲ್ಲಿ ಹೊಡೆದು ಮರು ಬೆಳಗ್ಗೆ ಹುಮ್ಮಸ್ಸಿನಿಂದ ಕೆಲಸಕ್ಕೆ ಹೊರಟಿದ್ದರು. ಆದರೆ, ಮುಂದಿನ ಒಂದೇ ದಿನದಲ್ಲಿ ರಾತ್ರಿ ಕಳೆದು ಬೆಳಕರಿಯುವಷ್ಟರಲ್ಲಿ ಏನು ಎತ್ತ ಎಂದು ಅರ್ಥವಾಗದಂತೆ ಎಲ್ಲವೂ ನಿಂತಲ್ಲೇ ಬೆಪ್ಪಾಗಿ ನಿಂತಿತ್ತು. ಪ್ರಧಾನಮಂತ್ರಿಗಳು ದೇಶ ಬಂದ್ ಮಾಡಿದಾರಂತೆ. ಯಾರೂ ಮನೆಯಿಂದ ಹೊರಗೆ ಬರಬಾರದಂತೆ... ಕೆಲಸಕ್ಕೆ ಹೋಗ್ಬಾರ್ದಂತೆ... ಅನ್ನುವ ಸುದ್ದಿ ಒಬ್ಬರಿಂದೊಬ್ಬರಿಗೆ ಬಿತ್ತರವಾಗಿತ್ತು. ಬೀದಿ ಜನ ಮತಿಗೆಟ್ಟು ದಿಕ್ಕಾಪಾಲಾಗುತ್ತಿರುವುದು ದಿನದಿಂದ ದಿನಕ್ಕೆ ಕಣ್ಣಿಗೆ ರಾಚುತ್ತಿತ್ತು. ಹೊಟ್ಟೆಗಾಗಿ ಊರದಾರಿಗೆ ಬೆನ್ನು ಹಾಕಿ ಬಂದ ಸಹವಾಸಿಗಳಲ್ಲಿ ಬಹಳಷ್ಟು ಜನ ಊರದಾರಿಗೆ ಹೊಟ್ಟೆ ತೋರಿಸುತ್ತ ಸಿಕ್ಕ ಸಿಕ್ಕ ವಾಹನಗಳಲ್ಲಿ ಹೊರಟಿದ್ದರು. ವಾಹನ ಸಿಗದವರು ಗುಂಪು ಗುಂಪಾಗಿ ಊರಿನತ್ತ ನಡಿಗೆ ಸುರು ಮಾಡಲು ತೀರ್ಮಾನಿಸಿದ್ದರು. ಮಾದೇವಿಯ ಜೊತೆಗಾತಿಯರಿಬ್ಬರೂ ಮರು ಮುಂಜಾನೆ ತಮ್ಮೂರ ಕಡೆಗೆ ಹೊರಡುವ ಜನರೊಂದಿಗೆ ಹೋಗುವ ತೀರ್ಮಾನಕ್ಕೆ ಬಂದಿದ್ದರಿಂದ ರಾತ್ರಿ ತಮ್ಮ ಸಾಮಾನುಗಳನ್ನು ಗಂಟು ಕಟ್ಟಿಕೊಳ್ಳಲಾರಂಭಿಸಿದರು. ಮಾದೇವಿಗೂ ಹೊರಡುವಂತೆ ಒತ್ತಾಯಿಸಿದರು. ಊರಲ್ಲಿ ಮಾದೇವಿಗೆ ತನ್ನದು, ತನ್ನವರು ಎಂದು ಕೂಡಿಕೊಳ್ಳುವಂತದ್ದೇನೂ ಇರಲಿಲ್ಲ. ಅವಳ ಕಣ್ಣು ಗಾಡಿ ಅಡಿಯಲ್ಲಿ ಮಲಗಿದ್ದ ಮಂಜನ ಮೇಲೆ ನೆಟ್ಟಿತ್ತು. ಬೆಳಗಿನ ಜಾವ ಅವರಿಬ್ಬರೂ ಕಣ್ಣೊರೆಸಿಕೊಳ್ಳುತ್ತ ಗಂಟು ತಲೆಗೇರಿಸಿ ಶೆಡ್ಡಿಗೆ ಬೆನ್ನು ಹಾಕಿ ಹೊರಟರು. ರಸ್ತೆ ತಿರುವಿನಲ್ಲಿ ನಿಂತು ತಿರುಗಿ ನೋಡಿ ಕೊನೆಯ ವಿದಾಯವೆಂಬಂತೆ ಮಾದೇವಿಗೆ ಕೈ ಬೀಸಿ ಮರೆಯಾದರು. ಶೂನ್ಯ ತುಂಬಿಕೊಂಡಂತೆ ನಿಂತ ಮಾದೇವಿಗೆ ಗಾಡಿ ಕೆಳಗೆ ಮಲಗಿದ್ದ ಮಂಜ ನಿದ್ದೆಗಣ್ಣಿನಲ್ಲಿ ಹಲುಬಿದ್ದು ಕೇಳಿಸಿತು. ಮುರುಟಿಕೊಂಡಿದ್ದ